# ಆಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಆಳಂದ

ಸಿ.ಸಿ.ನಂ.4698/2024

**ಸರ್ಕಾರದ ಪರವಾಗಿ ನರೋಣಾ ಪೋಲಿಸ ಠಾಣೆ**

**ವಿರುದ್ಧ**

1. ಶರಣಕುಮಾರ ತಂದೆ ಸಂಗಣ್ಣಾ ಪನಶೆಟ್ಟಿ, - **(ಮರಣ)**
   ವಃ 24 ವರ್ಷ, ಉಃ ಚಾಲಕ,
   ಸಾಃ ಗೋಳಾ(ಬಿ), ತಾಃ ಆಳಂದ, ಜಿಃ ಕಲಬುರಗಿ.

2. ಶರಣಪ್ಪಾ ತಂದೆ ಗುಂಡಪ್ಪಾ ರೋಳೆ,
   ವಃ 47 ವರ್ಷ, ಉಃ ಕಾರ ಚಾಲಕ,
   ಸಾಃ ತೋಳನವಾಡಿ, ತಾಃ ಕಮಲಾಪೂರ, ಜಿಃ ಕಲಬುರಗಿ.

## ಆಪಾಧನೆ

## ಶ್ರೀ.ಸುಮನ ಚಿತ್ತರಗಿ, ಅಪರ ನ್ಯಾ.ದಂ.ಗಳು, ಆಳಂದ ನಾನು ನಿಮ್ಮ ವಿರುದ್ಧ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸುತ್ತಿದ್ದೇನೆ.

ನರೋಣಾ ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಗೋಳಾ(ಬಿ) - ಕೇರಿ ಅಂಬಲಗಾ ಮುಖ್ಯ ರಸ್ತೆಯ, ಲಕ್ಷ್ಮಿ ಗುಡಿಯ ಸಮೀಪ ದಿನಾಂಕಃ 10.12.2023 ರಂದು 00.15 ಗಂಟೆಗೆ 2ನೇ ಆರೋಪಿತನಾದ ನೀವು 1ನೇ ಆರೋಪಿಗೆ ನಿಮ್ಮ ಹೆಸರಿನಲ್ಲಿರುವ ಮಾರುತಿ ಸ್ವಿಫ್ಟ ಡಿಜೈರ್ ಕಂಪನಿಯ ಕಾರ ನಂ.ಕೆಎ-03 ಎ.ಹೆಚ್-0461ನೇದ್ದನ್ನು ಚಲಾಯಿಸಿಕೊಂಡು ಹೊಗಲು ನೀಡಿದ್ದಿರಿಂದ 1ನೇ ಆರೋಪಿಯು ಗೋಳಾ(ಬಿ) ಕಡೆಯಿಂದ ತೋಳನವಾಡಿ ಗ್ರಾಮದ ಕಡೆಗೆ ಹೋಗುತ್ತಿದ್ದಾಗ ಅತೀವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಹೋಗಿ ರೋಡಿನ ತಗ್ಗಿನಲ್ಲಿ ಪಲ್ಟಿ ಮಾಡಿ 1ನೇ ಆರೋಪಿಯ ತಲೆಯ ಹಿಂದೆ, ಎಡಭಾಗದ ಎದೆಯ ಮೇಲೆ ಭಾರಿ ಗುಪ್ತಗಾಯ, ಮೂಗಿನಿಂದ ರಕ್ತಬಂದು, ಬಲಗೈ ಹಸ್ತದ ಮೇಲೆ ರಕ್ತಗಾಯ ಹಾಗೂ ಅಲಲ್ಲಿ ತರಚಿದ ರಕ್ತಗಾಯ ವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. 2ನೇ ಆರೋಪಿತನಾದ ನೀವು ನಿಮ್ಮ ವಾಹನಕ್ಕೆ ವಿಮೆ ಸಂದಾಯ ಮಾಡದೇ 1ನೇ ಆರೋಪಿತನಿಗೆ ಚಲಾಯಿಸಲು ನೀಡಿದ್ದು ಅಲ್ಲದೇ 1ನೇ ಆರೋಪಿತನು ಮದ್ಯದ ಅಮಲಿನಲ್ಲಿ ವಾಹನ ಚಲಾಯಿಸಿ ಅಪಘಾತ ಪಡಿಸಿರುತ್ತಾರೆ. ಆ ಮೇರೆಗೆ ಕಲಂ 196 ಐ.ಎಮ್. ವಿ. ರ ಕಾಯ್ದೆ ಪ್ರಕಾರ ಅಪರಾದವೇಸಗಿದ್ದಿರಿ ಎಂದು ಅಪಾಧಿಸಲಾಗಿದೆ, ಈ ಮೇರೆಗೆ ನೀವೇನು ಹೇಳುತ್ತೀರಿ.

ಪ್ರಶ್ನೆ ಃ ಈ ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರಃ ಅ.1:- **(ಮರಣ)**

ಅ.2:

ಪ್ರಶ್ನೆ ಃ ಸದರ ಆಪಾದನೆಗೆ ನೀನು ಒಪ್ಪುತ್ತಿಯಾ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ ಅ.1:- **(ಮರಣ)**

ಅ.2:

(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಒದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು)

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ ಎಫ್ ಸಿ**

**ನ್ಯಾಯಾಲಯ, ಆಳಂದ.**